ಎರಡು ಬಾರಿ ಹೇಳಿದೆ. ಗನ್ ಹಿಡಿದವನು, 'ಮಾತಾಡಬೇಡ; ಮೌನವಾಗಿ ಮುಂದೆ ನಡೆ' ಎಂದ.

ನನಗೆ ನಿರಾಶೆಯಾಯಿತು. ಆದರೂ ವಿಧೇಯಳಾಗಿ ವರ್ತಿಸಿದೆ. ಗನ್ ಹಿಡಿದವನು ಮುಂದೆ, ಇನ್ನೊಬ್ಬನು ನನ್ನ ಕೈ ಹಿಡಿದು, ಮೂರನೆಯವನು ನನ್ನ ಹಿಂದೆ. ನಾವು ಒಂದೇ ಸಾಲಿನಲ್ಲಿ ಸಾಗುತ್ತೇವೆ. ಸಂದರ್ಶನದ ಕ್ಷಣದವರೆಗೂ ನನ್ನನ್ನು ಮತ್ತು ನಾಗ್ಪಾಲ್‌ನ್ನು ಬೇರ್ಪಡಿಸುವುದೇ ಅವರ ಉದ್ದೇಶವಾಗಿರಬಹುದು ಎಂದು ನಾನು ಊಹಿಸಿಕೊಂಡೆ. ನನ್ನ ಕೈಗಳ ಕಟ್ಟಿರುವುದರಿಂದ ನಾನು ವೇಗವಾಗಿ ನಡೆಯಲು ಸಾಧ್ಯವಿಲ್ಲ. ಭಯವನ್ನು ದೂರ ಮಾಡಲು ನಾನು ಹೆಜ್ಜೆಗಳನ್ನು ಎಣಿಸಲು ಪ್ರಾರಂಭಿಸುತ್ತೇನೆ– 1,2,3,10,20,100... ಕ್ರಮೇಣ ಅದು ಗೊಂದಲವಾಗುತ್ತದೆ 500, 600... ಎಣಿಕೆ ತಪ್ಪುತ್ತದೆ; ನಾನು ಆ ಯೋಚನೆಯನ್ನು ಕೈಬಿಡುತ್ತೇನೆ.

ಈಗ ನಾವು ಸ್ವಲ್ಪ ತೆರೆದ ಸ್ಥಳಕ್ಕೆ ಪ್ರವೇಶಿಸಿದೆವು. ಮತ್ತು ಏಕಾಏಕಿ ಒಂದು ಪ್ರಾಚೀನ ದೇವಾಲಯದ ಅವಶೇಷಗಳ ಎದುರು ನಿಂತೆವು. ಪ್ರವೇಶದ್ವಾರದ ಮೇಲಿನ ಅಂಚಿನಲ್ಲಿ ಒಂದು ಶೃಂಗಾರ ಶಿಲ್ಪವಿರುವುದನ್ನು ಕಂಡೆ. ಆದರೆ ಶಿಲ್ಪ ವಿಕೃತಗೊಂಡಿದ್ದು ಅನೇಕ ಬಿರುಕುಗಳಿವೆ. ಗನ್ ಹಿಡಿದವನು ಮುಂಭಾಗದ ಬಾಗಿಲು ತೆಗೆದ.ಇದು ಶಂಕರ್ ಪಾಂಡೆ ಅವರೊಂದಿಗೆ ನನ್ನ ಸಂದರ್ಶನದ ಸ್ಥಳವೋ ಎಂದು ನಾನು ಆಶ್ಚರ್ಯ ಪಟ್ಟೆ. ಆವರಣವು ಯಾವುದೊ ಹಿಂದೂ ದೇವಾಲಯದಂತೆಯೇ ಇದೆ. ಜರ್ಜರಿತವಾದರೂ. ಹೊರಗೊಂದು ಗೋಡೆ, ಪ್ರದಕ್ಷಿಣೆಗಾಗಿ ಆವರಣ ಮತ್ತು ಮಧ್ಯದಲ್ಲಿ ಗರ್ಭಗುಡಿ. ಗೋಡೆಗಳ ಬಹುಪಾಲು ಕುಸಿದಿವೆ. ಗನ್ ಹಿಡಿದವನು ಬಾಗಿಲಲ್ಲಿ ಕಾವಲು ನಿಲ್ಲುತ್ತಾನೆ. ನನ್ನ ಕೈ ಹಿಡಿದಿದ್ದ ಇಬ್ಬರು ನನ್ನನ್ನು ದೇವಾಲಯದ ಹಿಂಭಾಗಕ್ಕೆ ಕರೆದೊಯ್ಯುತ್ತಾರೆ. ದಾರಿಯಲ್ಲಿ ಒಳಭಾಗವನ್ನು ಕ್ಷಿಪ್ರವಾಗಿ ಪರಿಶೀಲಿಸುತ್ತೇನೆ. ಮಧ್ಯದಲ್ಲಿ ಸರ್ಪದಿಂದ ಸುತ್ತಲ್ಪಟ್ಟ ಶಿವಲಿಂಗದ ವಿಗ್ರಹವಿದೆ. ನಾಗ್ಪಾಲ್‌ನ ಪಕ್ಕದ ಮೇಜಿನಲ್ಲಿ ನಾನು ಕಂಡಿದ್ದ ವಿಗ್ರಹದಂತೆಯೇ ಇದು ಇರುವುದರಿಂದ ನನಗೆ ಕುತೂಹಲವಾಗುತ್ತದೆ. ವಿಗ್ರಹದ ಮುಂದೆ ಭಸ್ಮ ತುಂಬಿದ ಒಂದು ಗುಂಡಿಯಿದೆ; ಅದರ ನಾಲ್ಕು ಮೂಲೆಗಳಲ್ಲಿ ನಾಲ್ಕು ಕಲ್ಲಿನ ಕಂಬಗಳಿವೆ. ಆ ಇಬ್ಬರು ನನ್ನನ್ನು ದೇವಾಲಯದ ಹಿಂದೆ, ಎತ್ತರವಾಗಿ ಬೆಳೆದ ಪೊದೆಗಳ ಹಿಂದೆ ಮರೆಮಾಚಿದ ಒಂದು ಶೆಡ್ ಒಳಗೆ ಎಳೆದುಕೊಂಡು ಹೋದರು. ಅವರು ನನ್ನನ್ನು ಕುರ್ಚಿಗೆ ಕಟ್ಟಿದರು. ನಂತರ ಹೊರಗಿನಿಂದ ಬೀಗ ಹಾಕುವ ಶಬ್ದ ಕೇಳುತ್ತದೆ; ಅವರು ಹೊರಟು ಹೋದರೆನಿಸುತ್ತದೆ. ಎಲ್ಲವೂ ಕ್ಷಣಾರ್ಧದಲ್ಲಿ ನಡೆಯಿತು. ಇದುವರೆಗೆ ಅವರ ಯಾವುದೇ ಕ್ರಮಕ್ಕೂ ನಾನು ಪ್ರತಿರೋಧಿಸಿಲ್ಲ. ಪ್ರಸ್ತುತ, ಅದಕ್ಕೆ ಕಾರಣವಿಲ್ಲವೆಂದು ತೋರುತ್ತದೆ.

ಗಂಟೆಗಟ್ಟಲೆ ಕಳೆಯಿತು; ಸಮಯದ ಅರಿವು ಕಳೆದುಕೊಂಡೆ. ಹೊರಗೆ ಸಂಪೂರ್ಣ ಕತ್ತಲು. ನನಗೆ ಬಹಳ ದಾಹ; ಖಾಲಿ ಹೊಟ್ಟೆಯಲ್ಲಿ ಹಸಿವಿನ ನೋವು ತೀವ್ರವಾಗಿದೆ. ಮಳೆ ದೇವರು ವಿರಾಮ ಘೋಷಿಸಿದಂತಿದೆ. ನಾನು ದಟ್ಟ ಅರಣ್ಯದ ಮಧ್ಯದಲ್ಲಿದ್ದೇನೆ ಎಂಬುದು ನನಗೆ ಖಚಿತ– ಬಹುಶಃ ಕೆಲವೇ ಜನರಿಗೆ ಮಾತ್ರ ತಿಳಿದಿರುವ ಗುಪ್ತ ಸ್ಥಳ. ನೀರಿಲ್ಲ, ಆಹಾರವಿಲ್ಲ– ಶಂಕರ್ ಪಾಂಡೆ ತಮ್ಮ ಅತಿಥಿಗಳನ್ನು ಹೀಗೆ ನೋಡಿಕೊಳ್ಳುವರೇ ಎಂದು ನಾನು ಅಚ್ಚರಿಪಡುತ್ತಿದ್ದೆ. ಬಹುಶಃ ನಾನು ಗುಪ್ತಚರ, ಬಂಡಾಯಗಾರ, ಅಥವಾ CRPF ಏಜೆಂಟ್ ಅಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳಲು ನನ್ನ ಮೇಲೆ ಇನ್ನೂ ನಿಗಾ ವಹಿಸಿದ್ದಾರೆ ಎಂದು ಭಾವಿಸಿಕೊಂಡೆ.

ಅಕಸ್ಮಾತ್ತಾಗಿ ಬೀಗ ತೆಗೆಯುವ ಶಬ್ದ ಕೇಳಿಸಿ ಇಬ್ಬರು ಒಳಗೆ ನುಗ್ಗಿದ್ದು ಕಂಡಿತು. ಅವರಲ್ಲಿ ಒಬ್ಬನು ಟಾರ್ಚ್ ಬೆಳಕನ್ನು ನನ್ನ ಮುಖದ ಮೇಲೆ ಬೀರಿದ. ಈಗ ಅವರು ಮುಖವಾಡ ಧರಿಸಿಲ್ಲ. ಅವರು ನನ್ನನ್ನು ಬಿಚ್ಚಿ ಎಳೆದುಕೊಂಡು ಗರ್ಭಗುಡಿಗೆ ಕರೆದೊಯ್ದರು. ಇನ್ನೂ ಕತ್ತಲೇ ಹರಡಿದೆ. ನಾಲ್ಕು ಕಂಬಗಳ ಮೇಲೆ ನಾಲ್ಕು ದೀಪಗಳು ಉಜ್ವಲವಾಗಿ ಹೊತ್ತಿವೆ. ಪ್ರತಿಯೊಂದು ಕಂಬಕ್ಕೂ ಒಂದು ಕೋಳಿಯನ್ನು ಅದರ ಒಂದು ಕಾಲಿಗೆ ಕಟ್ಟಿ ಹಾಕಿರುವುದನ್ನು ನೋಡಿ ನನಗೆ ವಿಚಿತ್ರ ಅನ್ನಿಸಿತು. ಕೋಳಿಗಳು ತಪ್ಪಿಸಿಕೊಳ್ಳಲು ಆತುರದಿಂದ ತೊಳಲಾಡುತ್ತಿವೆ. ಅವರು ನನ್ನನ್ನು ಭಸ್ಮ ಗುಂಡಿಯ